ಮೂಲಕ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಿವೆ. ಉದ್ಯೋಗ ಸೃಷ್ಟಿಯಾಗುತ್ತಿದೆ.

ಮುಖ್ಯವಾಗಿ ಯೋಚಿಸಬೇಕಾದುದು ರಂಗಭೂಮಿಯಲ್ಲಿಯೇ ನಟ ನಟಿಯರು ಉಳಿದುಕೊಳ್ಳಲು ಸಂಪನ್ಮೂಲ ಏನಿದೆ ಎನ್ನುವುದನ್ನು. ರಂಗಭೂಮಿಯಲ್ಲಿ ಸಂಶೋಧನೆ ಕೈಗೊಳ್ಳಲು ಇಲ್ಲವೆ ಇಲ್ಲಿಯೇ ಉಳಿಯಲು ಸೌಲಭ್ಯಗಳು ಇಲ್ಲ. ಅಕಾಡೆಮಿಗಳು ಈ ದಿಕ್ಕಿನಲ್ಲಿ ಆಲೋಚಿಸುತ್ತಿಲ್ಲ. ಹೊಸ ಪಠ್ಯಗಳನ್ನು ಆಯ್ಕೆ ಮಾಡಿಕೊಂಡು ಪ್ರಯೋಗಕ್ಕಿಳಿಸುವುದು, ಹೊಸ ರಂಗಭೂಮಿಯನ್ನು ಸೃಷ್ಟಿಸುವುದು ಅಕಾಡೆಮಿಗಳ ಜವಾಬ್ದಾರಿ. ಆದರೆ ಆ ರೀತಿ ಆಗುತ್ತಿಲ್ಲ. ಆದ್ದರಿಂದ ಕಲಾವಿದರು ಬದುಕು, ಉದ್ಯೋಗ, ಹಣ ಇತ್ಯಾದಿ ಕಾರಣಕ್ಕೆ ಸಿನಿಮಾ, ಕಿರುತೆರೆ ಹೀಗೆ ಬೇರೆ ಬೇರೆ ಸೃಜನಶೀಲ ಆಯಾಮಗಳಲ್ಲಿ ತೊಡಗಿಕೊಳ್ಳುತ್ತಾರೆ. ಇದು ಒಳ್ಳೆಯ ಬೆಳವಣಿಗೆ.

◆ **ಅಕಾಡೆಮಿಗಳು ಅನಿವಾರ್ಯವೇ?**

ಅಕಾಡೆಮಿಗಳು ಅಕಡೆಮಿಕ್ ಆಗಿ ಕೆಲಸ ಮಾಡಿದಾಗ ಮಾತ್ರ ಅನಿವಾರ್ಯ. ರಂಗಭೂಮಿ ನಡೆ ಆಗಾಗ್ಗೆ ಬದಲಾಗುತ್ತಿರುತ್ತದೆ. ಆ ಬದಲಾವಣೆಯನ್ನು ಅಕಾಡೆಮಿಗಳು ಗುರುತಿಸಬೇಕು. ಉತ್ಸವ ಆಯೋಜಿಸುವುದು, ಪ್ರಶಸ್ತಿ ನೀಡುವುದು ಇವುಗಳ ಕೆಲಸವಲ್ಲ. ಅಪರೂಪದ ನಾಟಕ ಸಿದ್ಧವಾದರೆ ಆ ಬಗ್ಗೆ ರಾಜ್ಯದ ವಿವಿಧ ಕಡೆಗಳಲ್ಲಿ ಸಂವಾದ ಆಯೋಜಿಸಬೇಕು. ಅಕಡೆಮಿಕ್ ಚರ್ಚೆಗಳನ್ನು ಸಂಘಟಿಸಬೇಕು. ರಂಗಭೂಮಿಯನ್ನು ತಾತ್ವಿಕ ಮತ್ತು ಆರ್ಥಿಕವಾಗಿ ಬೆಳೆಸಲು ನೆರವಾಗಬೇಕು. ಅಪರೂಪದ ನಿರ್ದೇಶಕರ ಮೇಲೆ ಸಂಶೋಧನೆ ಕೈಗೊಳ್ಳಲು ಅಗತ್ಯವಾದ ಸಂಪನ್ಮೂಲ ಒದಗಿಸಬೇಕು. ಆದರೆ ಅಕಾಡೆಮಿಗಳು ಈ ಕೆಲಸ ಮಾಡುತ್ತಿಲ್ಲ.

◆ **ರಂಗ ನಿರ್ದೇಶಕ ಸಿಜಿಕೆ ಕೆಲಸ ಮಾಡಿದ ಸಾಣೆಹಳ್ಳಿ ಮಠದ 'ಶಿವಸಂಚಾರ' ತಂಡದಲ್ಲಿ ನೀವು ಸಹ ಕೆಲಸ ಮಾಡಿದ್ದಿರಿ. ಮಠದ ಸಾಂಸ್ಥಿಕ ಮೌಲ್ಯಗಳ ಜತೆ ವಾಗ್ವಾದಕ್ಕೆ ಇಳಿದಿದ್ದು ಇದೆಯೇ?**

ಹ್ಹಹ್ಹಹ್ಹ... (ನಗು) ಏಳು ವರ್ಷ ಸಾಣೆಹಳ್ಳಿ ರಂಗಶಾಲೆಯ ಪ್ರಾಂಶುಪಾಲನಾಗಿದ್ದೆ. ರಂಗಭೂಮಿ ಸಾಂಸ್ಥಿಕ ಮೌಲ್ಯಗಳನ್ನು ಒಪ್ಪುವುದಿಲ್ಲ. ಸಿದ್ಧಮಾದರಿಗಳನ್ನು ಪ್ರಶ್ನಿಸುತ್ತದೆ. ಅಂತಹದ್ದರಲ್ಲಿ ಮಠದ ಒಳಗೆ ಥಿಯೇಟರ್ ಇಡುವುದೇ ಮಹತ್ವಪೂರ್ಣವಾದುದು. ರಂಗಶಾಲೆ ಹೇಗಿರಬೇಕು, ಯಾವ ರೀತಿ ರೂಪಿಸಬೇಕು ಎನ್ನುವುದಷ್ಟೇ ಅಲ್ಲಿ ನನ್ನ ಕೆಲಸ. ನನಗೆ ಪಂಡಿತಾರಾಧ್ಯ ಸ್ವಾಮೀಜಿ ಪೂರ್ಣ ಸಹಕಾರ ನೀಡಿದರು. ಆದರೆ ಅವರದ್ದೇ ಪಠ್ಯವನ್ನು ನಾಟಕ ಮಾಡುವಾಗ ನಮ್ಮ ನಡುವೆ ಕೆಲವು ವೇಳೆ ವೈಚಾರಿಕ ಜಗಳವೂ ಇರುತ್ತಿತ್ತು. ಆ ಜಗಳಗಳ ಸಮಯದಲ್ಲಿ ಅಲ್ಲಿಂದ ಹೊರಗೆ ಬರಬೇಕು ಅನ್ನಿಸುತ್ತಿತ್ತು. ನಂತರದ ದಿನಗಳಲ್ಲಿ ರಂಗಶಾಲೆಯಿಂದ ಹೊರಬಂದೆ. ಆದರೆ, ಜಗಳದಿಂದ ನಾನು ಅಲ್ಲಿಂದ ಹೊರ ಬಂದದ್ದಲ್ಲ.

◆ **ರಾಜಕೀಯ ಕಾರಣದಿಂದ ಇಂದು ರಂಗಭೂಮಿಯಲ್ಲಿ ಸಾಂಸ್ಥಿಕ ಮೌಲ್ಯಗಳ ಪ್ರತಿಪಾದಕರೂ ಪ್ರಬಲವಾಗುತ್ತಿದ್ದಾರೆ. ಇದರ ಪರಿಣಾಮಗಳು ಏನು?**

ಸರ್ಕಾರ, ಒಂದು ಜಾತಿಯ ಲೇಖಕರು, ಒಂದು ರಾಜಕೀಯ ಪಕ್ಷದ ಸಿದ್ಧಾಂತವನ್ನು ಓಲೈಸುವುದಕ್ಕಾಗಿಯೇ ಇತ್ತೀಚಿನ ದಿನಗಳಲ್ಲಿ ರಂಗಪಠ್ಯವನ್ನು ಕೆಲವರು ರೂಪಿಸುತ್ತಿದ್ದಾರೆ. ಇದರಿಂದ ಅನುದಾನ ದೊರೆಯುತ್ತದೆ.

ಅಕಾಡೆಮಿಗಳಿಗೆ ವಿದ್ವತ್ ಜನರೇ ಇರಬೇಕು. ಆಗ ಮಾತ್ರ ಚಲನಶೀಲತೆ ಸಾಧ್ಯ. ಯಾವುದೇ ಸರ್ಕಾರಗಳು ತಪ್ಪು ಹೆಜ್ಜೆಗಳನ್ನು ಇಟ್ಟಾಗ ಈ ಅಕಾಡೆಮಿಗಳಲ್ಲಿ ಇರುವವರನ್ನು ಅದನ್ನು